## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀಮತಿ ಕೆ.ಎಸ್. ನೇತ್ರಾವತಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮಧುಗಿರಿ, ಇವರ ಅನಧಿಕೃತ ಗೈರು ಹಾಜರಿ ಬಗ್ಗೆ- ಸೇವೆಯಿಂದ ವಜಾಗೊಳಿಸುವ ಕುರಿತು.

**ಓದಲಾಗಿದೆ;-**

1. ಕೃಷಿ ನಿರ್ದೇಶಕರ ಮೊದಲಿನ ಕಾರಣ ಕೇಳುವ ಸೂಚನಾ ಪತ್ರ ಸಂ. ಸಿಬ್ಬಂದಿ-1/ವಿಚಾರಣೆ-1/29/2007-08, ದಿನಾಂಕ: 20-10-2008
2. ಶ್ರೀಮತಿ ನೇತ್ರಾವತಿ, ಕೃಷಿ ಅದಿಕಾರಿ, ಇವರ ಲಿಖಿತ ಹೇಳಿಕೆ ದಿನಾಂಕ: 11-12-2008
3. ಕೃಷಿ ಆಯುಕ್ತರ ಕಚೇರಿ, ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-1/29/2007-08, ದಿನಾಂಕ: 21-07-2009
4. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ: 21-01-2010.

**ಪ್ರಸ್ತಾವನೆ:-**

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಕಾರಣ ಕೇಳುವ ಪತ್ರದಲ್ಲಿ ಕೃಷಿ ನಿರ್ದೇಶಕರು, ಶ್ರೀಮತಿ ಕೆ.ಎಸ್. ನೇತ್ರಾವತಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮಧುಗಿರಿ, ಇವರು ಮಣ್ಣು ಆರೋಗ್ಯ ಕೇಂದ್ರ, ತುಮಕೂರು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪ್ರಸೂತಿ ರಜೆ ಪಡೆದು ನಂತರ ನಿರಂತರವಾಗಿ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆಂದು ಅವರ ಮೇಲೆ ಕೆಳಕಂಡ 3 ಆರೋಪಗಳನ್ನು ಹೊರಿಸಿ, ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಗಿತ್ತು.

1) ಸದರಿ ಅಧಿಕಾರಿಯವರು ದಿನಾಂಕ: 14-05-2006 ರಿಂದ 25-09-2006 ರವರೆಗೆ 135 ದಿನಗಳ ಪ್ರಸೂತಿ ರಜೆಗೆ ಅರ್ಜಿ ಸಲ್ಲಿಸಿದ್ದು, ದಿನಾಂಕ: 26-09-2006 ರಂದು ಕರ್ತವ್ಯಕ್ಕೆ ಹಾಜರಾಗಿ ದಿನಾಂಕ: 27-09-2006 ರಿಂದ 25-07-2007ರವರೆಗೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತಾರೆ.

2) ಸದರಿ ಅಧಿಕಾರಿಯವರು ದಿನಾಂಕ: 19-08-2007 ರಿಂದ 19-03-2008 ರವರೆಗೆ (ನಿಲಂಬನೆ ಆದೇಶದವರೆಗೆ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ದಿನಾಂಕ: 19-08-2007ರಿಂದ ವೈದ್ಯಕೀಯ ಕಾರಣದ ಮೇರೆಗೆ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿ ರಜೆ ಮಂಜೂರಾತಿಗಾಗಿ ಸಿ.ಟಿ.ಸಿ. ಸಲ್ಲಿಸಿ ಯಾರಿಗೂ ಪ್ರಭಾರ ವಹಿಸಿಕೊಟ್ಟಿರುವುದಿಲ್ಲ.

3) ಸದರಿ ಅಧಿಕಾರಿಯವರು ದಿನಾಂಕ: 19-08-2007ರಿಂದ ಕರ್ತವ್ಯಕ್ಕೆ ಹಾಜರಾಗದೇ ದಿನಾಂಕ: 05-09-2007 ರಿಂದ 31-10-2007 ರವರೆಗೆ ಇಂಗ್ಲೆಂಡಿಗೆ ತೆರಳಲು ರಜೆ ಕೋರಿರುತ್ತಾರೆ. ವಿದೇಶಕ್ಕೆ ತೆರಳುವ ಮುನ್ನ ಇಲಾಖೆಯ ಮುಖ್ಯಸ್ಥರಿಂದ ಅನುಮತಿ ಪಡೆದಿರುವುದಿಲ್ಲ.

ಮೇಲ್ಕಂಡ ಆರೋಪಗಳಿಗೆ ಸಂಬಂಧಿಸಿದಂತೆ ಶ್ರೀಮತಿ ನೇತ್ರಾವತಿ, ಕೃಷಿ ಅಧಿಕಾರಿಯವರು ಕ್ರಮಾಂಕ(2)ರಲ್ಲಿ ಓದಲಾದ ಪತ್ರದಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ತಾವು ಕರ್ತವ್ಯಕ್ಕೆ ಗೈರು ಹಾಜರಿಯಾಗಲು ತಮ್ಮ ಮಕ್ಕಳ ಯೋಗ ಕ್ಷೇಮವೇ ಮುಖ್ಯವಾಗಿತ್ತೆಂದು, ಮತ್ತು ತಮ್ಮ ಪತಿ ಇಂಗ್ಲೆಂಡಿನಲ್ಲಿದ್ದುರಿಂದ ಅನಿವಾರ್ಯವಾಗಿ ತಾವು ಸಹ ಅವರೊಂದಿಗೆ ಹೋಗಬೇಕಾಯಿತ್ತೆಂದು ಹೇಳಿಕೆ ಸಲ್ಲಿಸಿ ತಾವು ಅನಧಿಕೃತ ಗೈರು ಹಾಜರಿಯಾಗಿರುವುದರಲ್ಲಿ ಯಾವುದೇ ದುರುದ್ದೇಶವಿರಲಿಲ್ಲವೆಂದು ತಿಳಿಸಿರುತ್ತಾರೆ.

ಅವರ ಈ ಹೇಳಿಕೆಗೆ ಸಂಬಂಧಿಸಿದಂತೆ ಕೃಷಿ ಆಯುಕ್ತರು, ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ತಮ್ಮ ಕಛೇರಿ ಆದೇಶದಲ್ಲಿ ಶ್ರೀಮತಿ ಕೆ.ಎಸ್. ನೇತ್ರಾವತಿರವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸತ್ಯಾ-ಸತ್ಯತೆಯನ್ನು ತಿಳಿದುಕೊಳ್ಳುವ ಉದ್ದೇಶದಿಂದ, ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ, ಅದರಂತೆ ಶ್ರೀ.ಎ.ಎಲ್. ಪೂಜಾರ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ, ಮತ್ತು ಆಡಳಿತ ಅಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರ ಕಚೇರಿ, ತುಮಕೂರು, ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುತ್ತಾರೆ. ಸದರಿ ಆದೇಶದಂತೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿ ವಿಚಾರಣೆ ನಡೆಸಿ ವರದಿ ನೀಡಿದ್ದು, ಸದರಿ ವಿಚಾರಣಾ ವರದಿಯಲ್ಲಿ ಶ್ರೀಮತಿ ಕೆ.ಎಸ್. ನೇತ್ರಾವತಿ, ಕೃಷಿ ಅಧಿಕಾರಿ, ರವರ ಮೇಲಿನ ಎಲ್ಲಾ ಆಪಾದನೆಗಳು ಸಾಬೀತಾಗಿರುತ್ತವೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ (1) ಶ್ರೀ. ಬಿ.ಆರ್. ಶಂಕರ್, ಹಿಂದಿನ ಜಂಟಿ ಕೃಷಿ ನಿರ್ದೇಶಕರು, ತುಮಕೂರು (2) ಶ್ರೀ ವೈ. ಅಶ್ವಥ ನಾರಾಯಣ, ತಾಂತ್ರಿಕ ಸಹಾಯಕರು (ಪ್ರಭಾರ) ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಧುಗಿರಿ, ಹಾಗೂ. (3) ಶ್ರೀ ಎಸ್. ಜಿ. ಗುಣಕಿ, ಅಧೀಕ್ಷಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮಧುಗಿರಿ ಇವರು ಸಾಕ್ಷಿದಾರರಾಗಿದ್ದ ದೋಷಾರೋಪಣೆಯನ್ನು ಸಮರ್ಥಿಸಲು 9 ದಾಖಲೆಗಳನ್ನು ಗುರುತಿಸಲಾಗಿದೆ. ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ, ವಿಚಾರಣಾಧಿಕಾರಿಯವರು ಆರೋಪಿತ ಅಧಿಕಾರಿಯವರಿಗೆ ಸೂಚನಾ ಪತ್ರವನ್ನು ಜಾರಿ ಮಾಡಿದರೂ ಆರೋಪಿತ ಅಧಿಕಾರಿಯವರು ವಿಚಾರಣೆಗೆ ಹಾಜರಾಗಿರುವುದಿಲ್ಲ. ವಿಚಾರಣೆಗೆ ಹಾಜರಾಗದೇ ಇರುವುದು, ಅವರ ಮೇಲಿನ ಆರೋಪಗಳನ್ನು ಒಪ್ಪಿಕೊಂಡಂತಾಗುತ್ತದೆಂದು ವಿಚಾರಣಾಧಿಕಾರಿಯವರು ವಿಚಾರಣೆಯ ಮೊದಲ ಹಂತದಲ್ಲಿ ಅಭಿಪ್ರಾಯ ನೀಡಿರುತ್ತಾರೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾದ ಸಾಕ್ಷಿಯಾಗಿದ್ದ ಶ್ರೀ. ಬಿ.ಆರ್. ಶಂಕರ್, ಜಂಟಿ ಕೃಷಿ ನಿರ್ದೇಶಕರು, ತುಮಕೂರು, (ಪಿ.ಡಬ್ಲ್ಯು-1,) ಇವರು ಆರೋಪಿತ ಅಧಿಕಾರಿಯವರ ಮೇಲಾಧಿಕಾರಿಯಾಗಿದ್ದು, ಆರೋಪಿತ ಅಧಿಕಾರಿಯವರು ದಿನಾಂಕ: 10-04-2006ರಿಂದ ಮಣ್ಣು ಪರೀಕ್ಷಾ ಕೇಂದ್ರದಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಆರೋಪಿತ ಅಧಿಕಾರಿಯವರು 135 ದಿನಗಳ ಪ್ರಸೂತಿ ರಜೆಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ರಜೆಯ ಅವಧಿ ನಂತರ ದಿನಾಂಕ: 26-09-2006ರಂದು ಕರ್ತವ್ಯಕ್ಕೆ ಹಾಜರಾಗಿ ತದನಂತರ ದಿನಾಂಕ: 27-09-2006 ರಿಂದ 30-09-2006ರವರೆಗೆ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಬಗ್ಗೆ ಅಂಚೆ ಮೂಲಕ ದಿನಾಂಕ: 02-10-2006 ಕಳುಹಿಸಿರುತ್ತಾರೆಂದು, ಸದರಿ ಸಾಂಧರ್ಬಿಕ ರಜೆ ಮಂಜೂರಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆಂದು ವರದಿ ನೀಡಿರುವರು ಹಾಗೂ ಮತ್ತೆ ದಿನಾಂಕ: 03-10-2006 ರಿಂದ 01-12-2006ರವರೆಗೆ ತಮ್ಮ ಮಗುವಿಗೆ ಆರೋಗ್ಯ ಸರಿಯಿಲ್ಲವೆಂದು, ತಿಳಿಸಿ, ವೈದ್ಯಕೀಯ ಕಾರಣಗಳ ಮೇಲೆ ರಜೆ ಮಂಜೂರು ಮಾಡುವಂತೆ ಕೋರಿ ಅರ್ಜಿಯನ್ನು ಕಳುಹಿಸಿರುತ್ತಾರೆ. ಆದರೆ ಅಧಿಕಾರಿಯವರ ಮಗುವಿಗೆ ಆರೋಗ್ಯ ಸರಿಯಿಲ್ಲದಿದ್ದಲ್ಲಿ, ಆರೋಪಿತ ಅಧಿಕಾರಿಯವರು ವೈದ್ಯಕೀಯ ಕಾರಣದ ಮೇಲೆ ರಜೆ ಕೋರಿರುವುದು ಅಸಮಂಜಸವೆನಿಸುತ್ತದೆ. ಅಲ್ಲದೆ ಅವರ ಮೇಲಾಧಿಕಾರಿಯವರು ಈ ರಜೆಯನ್ನು ಮಂಜೂರು ಮಾಡಿರುವುದಿಲ್ಲ. ನಂತರ ಸದರಿ ಆರೋಪಿತ ಅಧಿಕಾರಿಯವರಿಗೆ ಅನೇಕ ಸಲ ಪತ್ರಗಳನ್ನು ಜಾರಿ

ಮಾಡಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದರೂ ಸಹ ಅವರಿಂದ ಯಾವುದೇ ಪ್ರತಿಕ್ರಿಯೆ ಇಲ್ಲವಾದ್ದರಿಂದ, ಈ ಬಗ್ಗೆ "ಪ್ರಜಾ ಪ್ರಗತಿ" ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಿಸಿದ ನಂತರ ಆರೋಪಿತ ಅಧಿಕಾರಿಯವರು, ದಿನಾಂಕ:26-07-2007ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ನಂತರ ಮತ್ತೆ ಆರೋಪಿತ ಅಧಿಕಾರಿಯವರು ಯಾವುದೇ ರಜೆಗಳನ್ನು ಅಧಿಕೃತವಾಗಿ ಮಂಜೂರು ಮಾಡಿಕೊಳ್ಳದೇ ಅನಧಿಕೃತವಾಗಿ ಸರ್ಕಾರಿ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆಂದು ದಾಖಲೆಗಳ ಮೂಲಕ ಸಾಕ್ಷಿದಾರರು ವಿಚಾರಣಾಧಿಕಾರಿಯವರು ನಡೆಸುವ ವಿಚಾರಣೆಯಲ್ಲಿ ಸಾಬೀತು ಮಾಡಿ ಸಾಕ್ಷಿ ನೀಡಿರುತ್ತಾರೆಂದು ವಿಚಾರಣಾಧಿಕಾರಿಯವರು ವಿಚಾರಣಾ ವರದಿಯಲ್ಲಿ ಅಭಿಪ್ರಾಯ ನೀಡಿರುತ್ತಾರೆ.

ಅವರ ಮೇಲಿರುವ ಎರಡನೇ ಆರೋಪದ ಬಗ್ಗೆ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಯವರು, ಆರೋಪಿತ ಅಧಿಕಾರಿಯವರು, ದಿನಾಂಕ: 19-08-2007 ರಿಂದ 19-03-2008 ರವರೆಗೆ ವೈದ್ಯಕೀಯ ರಜೆಗಾಗಿ ಅರ್ಜಿ ಬರೆದುಕೊಟ್ಟಿದ್ದು, ದಿನಾಂಕ: 05-09-2007ರಂದು ಸಿ.ಟಿ.ಸಿಯನ್ನು ತಾವೇ ಸಹಿ ಮಾಡಿ, ಅವರಿಗಿರುವ ಪ್ರಭಾರವನ್ನು ಯಾರಿಗೂ ನೀಡದೇ ಕರ್ತವ್ಯ ಲೋಪ ಎಸಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ, ಸದರಿ ಅಧಿಕಾರಿಯವರು ಸರ್ಕಾರದ ಕರ್ತವ್ಯದ ಕಡೆಗೆ ಹೆಚ್ಚು ಗಮನ ನೀಡದೇ, ಒಬ್ಬ ಜವಾಬ್ದಾರಿಯತ ಅಧಿಕಾರಿಯಾಗಿದ್ದು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ ಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ ಎಂದು ವಿಚಾರಣಾಧಿಕಾರಿಯವರು ಅಭಿಪ್ರಾಯ ಪಟ್ಟಿರುತ್ತಾರೆ.

ಇನ್ನೂ ಸದರಿ ಅಧಿಕಾರಿಯವರ ಮೇಲಿರುವ 3ನೇ ಆರೋಪದ ಬಗ್ಗೆ ವಿಚಾರಣೆಯ ಸಮಯದಲ್ಲಿ ಸಾಕ್ಷಿದಾರು ಸ್ಪಷ್ಟವಾದ ದಾಖಲೆಗಳನ್ನು ನೀಡಿರುತ್ತಾರೆ. ಅದಲ್ಲದೇ ಆರೋಪಿತ ಅಧಿಕಾರಿಯವರು, ಸರ್ಕಾರದಿಂದ ನಿರಾಕ್ಷೇಪಣಾ ಪತ್ರ (ಎನ್.ಓ.ಸಿ.) ಪಡೆಯದೇ ಎರಡು ಸಲ ವಿದೇಶಕ್ಕೆ ತೆರಳಿರುವುದು ದಾಖಲೆಗಳಿಂದ ಕಂಡು ಬರುತ್ತದೆ ಹಾಗೂ ಅದನ್ನು ಸದರಿ ಸಾಕ್ಷಿದಾರರು ಹೇಳಿರುತ್ತಾರೆಂದು ವಿಚಾರಣಾಧಿಕಾರಿಯವರು ಸದರಿ ವರದಿಯಲ್ಲಿ ಅಭಿಪ್ರಾಯ ಪಟ್ಟು ಸದರಿ ಆರೋಪವು ಸಹ ಸಾಬೀತಾಗಿದೆಯೆಂದು ವರದಿ ನೀಡಿರುತ್ತಾರೆ. ಅದಲ್ಲದೇ ಆರೋಪಿತ ಅಧಿಕಾರಿಯವರು, ದಿನಾಂಕ: 05-09-2007 ರಿಂದ 31-10-2007 ರವರೆಗೆ ಇಂಗ್ಲೆಂಡಿನಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ವಿದೇಶದಲ್ಲಿ ವಾಸವಾಗಿದ್ದಾರೆಂಬುದು ಸ್ಪಷ್ಟವಾಗಿರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ.

ಶಿಸ್ತು ಪ್ರಾಧಿಕಾರವು, ಆರೋಪಿತ ಅಧಿಕಾರಿಯವರಾದ ಶ್ರೀಮತಿ ನೇತ್ರಾವತಿ, ಕೃಷಿ ಅಧಿಕಾರಿ ಇವರು ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅವರು ತಮ್ಮ ಮೊದಲನೇ ಹಾಗೂ ಎರಡನೇ ಆರೋಪದ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಿರುವಲ್ಲಿ, ತಾವು ಅನಿವಾರ್ಯವಾಗಿ ತಮ್ಮ ಪತಿಯವರೊಂದಿಗೆ ವಿದೇಶ ಪ್ರಯಾಣ ಕೈಗೊಂಡಿದ್ದು, ಅಲ್ಲಿ ವಾಸವಾಗಿರುವುದನ್ನು ಒಪ್ಪಿಕೊಂಡಿರುವುದೇ ಅಲ್ಲದೆ ಅವರೊಬ್ಬ ಸರ್ಕಾರದ ಜವಾಬ್ದಾರಿಯುತ ಅಧಿಕಾರಿಯಾಗಿದ್ದು ವಿದೇಶಕ್ಕೆ ತೆರಳುವ ಪೂರ್ವ ಸಂಬಂಧಪಟ್ಟ ಪ್ರಾಧಿಕಾರದಿಂದ **No Objection Certificate** ನ್ನು ಕಡ್ಡಾಯವಾಗಿ ಪಡೆಯಲೇ ಬೇಕಾಗುತ್ತದೆ. ಅದಲ್ಲದೇ, ಸದರಿ ಅಧಿಕಾರಿಯವರು ಇಲಾಖಾ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ವಿಚಾರಣೆಯ ಸಮಯದಲ್ಲಿ ಪ್ರಾಸಿಕ್ಯೂಶನ್ ಸಾಕ್ಷಿದಾರರು, ಸದರಿಯವರ ಮೇಲಿನ ಆರೋಪಗಳ ಬಗ್ಗೆ ಸಾಕ್ಷಿ ನೀಡಿದ್ದು, ಅದಕ್ಕೆ ಪೂರಕವಾಗಿ ದಾಖಲೆಗಳನ್ನು ಸಹ ಹಾಜರುಪಡಿಸಿರುತ್ತಾರೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಅವರ ಮೇಲಿನ ಆರೋಪಗಳನ್ನು ಸಾಕ್ಷಾಧಾರಗಳಿಂದ ಸಾಬೀತಾಗಿರುವುದಾಗಿ ದೃಢಪಡಿಸಿರುವುದರಿಂದ ಶ್ರೀಮತಿ ಕೆ.ಎಸ್.ನೇತ್ರಾವತಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮಧುಗಿರಿ, ತುಮಕೂರು ಜಿಲ್ಲೆ, ಇವರನ್ನು ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂ. ಕೃಇ 79 ಕೃಪವಿ 2012**

**ಬೆಂಗಳೂರು ದಿನಾಂಕ:28-05-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀಮತಿ ಕೆ.ಎಸ್. ನೇತ್ರಾವತಿ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಮಧುಗಿರಿ, ತುಮಕೂರು ಜಿಲ್ಲೆ, ಇವರು ದಿನಾಂಕ:14-05-2006ರಿಂದ ಪ್ರಸೂತಿ ರಜೆ ಮೇಲೆ ತೆರಳಿ, ಪ್ರಸೂತಿ ರಜೆಯ ನಂತರ ದಿನಾಂಕ:26-09-2006 ರಂದು ಕರ್ತವ್ಯಕ್ಕೆ ಹಾಜರಾಗಿ ಮತ್ತೆ ದಿನಾಂಕ:27-09-2006 ರಿಂದ ಅನಧಿಕೃತವಾಗಿ ಸರ್ಕಾರದ ಕರ್ತವ್ಯಕ್ಕೆ ಗೈರು ಹಾಜರಾಗಿರುವುದಲ್ಲದೇ, ಇಲಾಖಾ ಮುಖ್ಯಸ್ಥರ

ಅನುಮತಿ ಇಲ್ಲದೇ ವಿದೇಶಕ್ಕೆ ತೆರಳಿರುವಂತಹ ಗುರುತರವಾದ ಲೋಪ ಎಸಗಿ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದರಿಂದ, ಸದರಿ ಅಧಿಕಾರಿಯವರನ್ನು ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 8(viii)ರಡಿಯಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

<u>ಇವರಿಗೆ:-</u>

1. ಮಹಾಲೇಖಪಾಲರು (ಲೆಕ್ಕ ತಪಾಸಣೆ/ಲೆಕ್ಕ ಪತ್ರ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು
3. ಜಂಟಿ ಕೃಷಿ ನಿರ್ದೇಶಕರು, ತುಮಕೂರು, ತುಮಕೂರು ಜಿಲ್ಲೆ.
4. ಸಹಾಯಕ ಕೃಷಿ ನಿರ್ದೇಶಕರು (ಮಣ್ಣು ಆರೋಗ್ಯ ಕೇಂದ್ರ,) ಮಧುಗಿರಿ, ತುಮಕೂರು ಜಿಲ್ಲೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ,
6. ಸರ್ಕಾರದ ಉಪ ಕಾರ್ಯದರ್ಶಿಯವರು, ಕೃಷಿ ಇಲಾಖೆ.
7. ಸಂಬಂಧಪಟ್ಟ ಅಧಿಕಾರಿಗಳಿಗೆ (ಕೃಷಿ ಆಯುಕ್ತರ ಮೂಲಕ)
8. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು